ಮೇಲೆ ಹೇರಿಲಾದ ನಿರ್ಬಂಧಗಳನ್ನು ಪಟ್ಟಿ ಮಾಡಿದಳು. 'ಯಹೂದಿಗಳು ಯಹೂದಿಯ ನಕ್ಷತ್ರ ಚಿಹ್ನೆಯನ್ನು ಧರಿಸಬೇಕು. ತಮ್ಮ ಸೈಕಲ್‌ಗಳನ್ನು ನಾಜಿಗಳಿಗೆ ಹಸ್ತಾಂತರಿಸಬೇಕು. ಯಹೂದಿಗಳಿಗೆ ಟ್ರಾಮ್ ಅಂದರೆ ಪ್ರಯಾಣಿಕ ವಾಹನಗಳಲ್ಲಿ ಪ್ರವೇಶವಿಲ್ಲ. ಅವರು ಕಾರುಗಳಲ್ಲಿ ಸಂಚರಿಸುವಂತಿಲ್ಲ. ಯಹೂದಿಯ ಮಕ್ಕಳು ಯಹೂದಿ ಶಾಲೆಯಲ್ಲೇ ಓದಬೇಕು'.

ಆನ್ನಿ ತನ್ನ ಡೈರಿಯನ್ನು ಸದಾ ತನ್ನ ಬಳಿಯೇ ಇಟ್ಟುಕೊಂಡಿರುತ್ತಿದ್ದಳು. ಅದರಲ್ಲಿ ಅವಳು ಯುದ್ಧದ ವಾತಾವರಣದ ಭಯ, ತನ್ನ ಮುಂದಿನ ಭರವಸೆ ಮತ್ತು ಅಡಗುತಾಣದಲ್ಲಾಗುವ ಅನುಭವಗಳನ್ನು ದಾಖಲಿಸಿದಳು. ಅನೇಕ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿದಳು. ಆ ಪಾತ್ರಗಳು ಅನೇಕ ಸ್ನೇಹಿತರ ಗುಂಪನ್ನು ರೂಪಿಸಿದವು. ಅವುಗಳಲ್ಲಿ ಅವಳು 'ಕಿಟ್ಟಿ'ಗೆ ಮೊದಲ ಆದ್ಯತೆ ನೀಡಿದ್ದಳು. ಆನ್ನಿ ಅವಳನ್ನು 'ಡಿಯರ್ ಕಿಟ್ಟಿ', 'ಮೈ ಡಾರ್ಲಿಂಗ್ ಕಿಟ್ಟಿ' ಮತ್ತು 'ಡಿಯರೆಸ್ಟ್ ಕಿಟ್ಟಿ' ಎಂದು ಸಂಬೋಧಿಸಿದ್ದಾಳೆ. ತನ್ನ ಸ್ನೇಹಿತರನ್ನು ನೆನೆದು, 'ಈ ಬೆಚ್ಚಗಿನ ಹಾಸಿಗೆಯಲ್ಲಿ ಮಲಗಿದ್ದಕ್ಕೆ ನನಗೆ ಕೆಟ್ಟ ಭಾವನೆ ಬರುತ್ತಿದೆ. ಅಲ್ಲಿ ನನ್ನ ಸ್ನೇಹಿತರು ಎಲ್ಲೋ ಹೊರಗೆ ಇರುವರು, ಅವರನ್ನು ಎಸೆದು ನೆಲಕ್ಕೆ ಹಾಕುವರು. ಕಾರಣ ಕೇವಲ ಅವರು ಯಹೂದಿಯಾಗಿದ್ದಕ್ಕೆ' ಎಂದು ತನ್ನ ಮನದಾಳದ ದುಃಖ ಹೊರಹಾಕಿದ್ದಾಳೆ.

ಎರಡು ವರ್ಷಗಳ ಕಾಲ ಆನ್ನಿ ಡೈರಿಯನ್ನು ಬರೆದಿದ್ದಾಳೆ. ನಾಜಿಯವರಿಗೆ ಸೆರೆಯಾಗುವ ಭಯ, ಒಂಟಿತನದ ಭಾವನೆಗಳು ಮತ್ತು ತನಗೆ ಸಿಗದ ಖಾಸಗಿ ಸಮಯ, ಅಡಗುತಾಣದ ದಿನನಿತ್ಯದ ಜೀವನ, ಮನೆಯಲ್ಲಿನ ವಾದ ವಿವಾದಗಳು, ಸಹೋದರಿಯ ಬಗ್ಗೆ ಅಸೂಯೆ, ತಾಯಿಯಿಂದಾಗುವ ಕಿರಿಕಿರಿ, ಲೈಂಗಿಕ ಅರಿವು, ತನ್ನ ಬದಲಾಗುತ್ತಿರುವ ದೇಹ, ಪತ್ರಕರ್ತೆ ಅಥವಾ ಬರಹಗಾರಳಾಗುವ ಇಚ್ಛೆ – ಹೀಗೆ, ಅನೇಕ ವಿಷಯಗಳ ಬಗ್ಗೆ ಬರೆದಿದ್ದಾಳೆ. ಕಥೆ, ಪ್ರಬಂಧ ಮತ್ತು ಕವಿತೆಗಳನ್ನೂ ಬರೆದಿದ್ದಾಳೆ.

ಆನ್ನಿ ತನ್ನ ಕೊನೆಯ ಬರಹವನ್ನು ಆಗಸ್ಟ್ 1, 1944ರಂದು, ಜರ್ಮನ್ ಪೊಲೀಸರಿಂದ ಬಂಧನಕ್ಕೊಳಗಾಗುವ ಮೂರು ದಿನಗಳ ಮುಂಚೆ ಬರೆದಿದ್ದಾಳೆ. ಆ ಬರಹದಲ್ಲಿ ಆಕೆ, 'ಗೊಂದಲ, ದುಃಖ ಮತ್ತು ಸಾವನ್ನು ಒಳಗೊಂಡಿರುವ ಈ ಅಡಿಪಾಯದಲ್ಲಿ ನನ್ನ ಭರವಸೆಗಳನ್ನು ಬೆಳೆಸಲು ಸಾಧ್ಯವಿಲ್ಲ. ಜಗತ್ತು ಅರಣ್ಯವಾಗಿ ಬದಲಾಗುತ್ತಿರುವುದನ್ನು ನೋಡುತ್ತಿದ್ದೇನೆ. ನಾನು ಅನುಭವಿಸುವ ನೋವುಗಳನ್ನು ಇನ್ನೂ ಲಕ್ಷಾಂತರ ಜನರು ಅನುಭವಿಸುತ್ತಿರುವರು. ನಾನು ಸ್ವರ್ಗವನ್ನು ನೋಡಿದರೆ, ಎಲ್ಲವೂ ಸರಿಯಾಗುತ್ತದೆ. ಈ ಕ್ರೌರ್ಯವು ಕೊನೆಗೊಳ್ಳುತ್ತದೆ. ಶಾಂತಿ ಮತ್ತೆ ಮರಳುತ್ತದೆ ಎಂದು ನಾನು ಭಾವಿಸುತ್ತೇನೆ'.

ಬಂಧನದ ನಂತರ ಎಡಿತ್ ಮತ್ತು ಅವಳ ಹೆಣ್ಣುಮಕ್ಕಳನ್ನು ಒಟ್ಟೊನಿಂದ ಬೇರೆ ಮಾಡಲಾಯಿತು. ಅವರೆಂದೂ ಮತ್ತೆ ಭೇಟಿಯಾಗಲೇ ಇಲ್ಲ. ಎಡಿತ್ ತನ್ನ ಮಕ್ಕಳನ್ನು ಜೀವಂತವಾಗಿಡಲು ಮಾರ್ಗ ಹುಡುಕುತ್ತಿರುವಾಗಲೇ, 1944ರ ಅ. 30ರಂದು ತಾಯಿ ಮತ್ತು ಮಕ್ಕಳನ್ನು ಪ್ರತ್ಯೇಕಿಸಲಾಯಿತು. ಎಡಿತ್ ತನ್ನ ಮಕ್ಕಳ ಕೊರಗಿನಲ್ಲಿ 1945ರ ಜನವರಿ 6ರಂದು ಮರಣಹೊಂದಿದಳು.

1945ರ ಆರಂಭದಲ್ಲಿ ಸಹೋದರಿಯರಿದ್ದ ಶಿಬಿರದಲ್ಲಿ ಟೈಫಸ್ ಸಾಂಕ್ರಾಮಿಕ ರೋಗ ಹರಡತೊಡಗಿತು. ಸುಮಾರು 17 ಸಾವಿರ ಕೈದಿಗಳು ಸಾವೀಗೀಡಾದರು. ಆನ್ನಿ ಮತ್ತು ಅವಳ ಸಹೋದರಿಯೂ ಟೈಫಸ್ ಜ್ವರದಿಂದ ನಿಧನರಾದರು. ಮುಂದೆ ಸೋವಿಯತ್ ಒಕ್ಕೂಟದ ಪಡೆಗಳು ಆ ಪ್ರದೇಶವನ್ನು ಸ್ವತಂತ್ರಗೊಳಿಸಿದ ನಂತರ ಆನ್ನಿ ತಂದೆ ಒಟ್ಟೊ ಫ್ರಾಂಕ್ ಬದುಕುಳಿದರು.

ರಹಸ್ಯ ಅಡಗುತಾಣದಲ್ಲಿ ಅಡಗಿಕೊಳ್ಳಲು ಸಹಾಯ ಮಾಡಿದ್ದ ಒಟ್ಟೊ ಫ್ರಾಂಕ್‌ನ ಆತ್ಮೀಯರು ಆನ್ನಿ ಫ್ರಾಂಕ್‌ಳ ಎಲ್ಲಾ ಕಾಗದಗಳನ್ನು ಮತ್ತು ಡೈರಿಯನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡಿದ್ದರು. ಒಟ್ಟೊ ಮರಳಿ ಬಂದಾಗ ಅವನಿಗೆ ಅವುಗಳನ್ನು ಹಸ್ತಾಂತರಿಸಿದರು. ಮಗಳ ಪ್ರಬುದ್ಧ ಬರವಣಿಗೆಯನ್ನು ನೋಡಿ ಒಟ್ಟೊ ಚಕಿತನಾದ. ಮಗಳ ಬರಹಗಳನ್ನು ಪ್ರಕಟಿಸಲು ಮುಂದಾದ. ಆದರೆ, ಪುಸ್ತಕ ಪ್ರಕಟಿಸಲು ಪ್ರಕಾಶಕರು ಮುಂದಾಗಲಿಲ್ಲ. ಸತತ ಪ್ರಯತ್ನದ ನಂತರ 1947ರಲ್ಲಿ 'ಹೆಚ್ ಅಚರ್‌ಹುಯಿಸ್' (ದಿ ಅನೆಕ್ಸ್) ಹೆಸರಿನಲ್ಲಿ ಪುಸ್ತಕ ಪ್ರಕಟಣೆಗೊಂಡಿತು. 1952ರಲ್ಲಿ 'ಆನ್ ಫ್ರಾಂಕ್ – ದಿ ಡೈರಿ ಆಫ್ ಎ ಯಂಗ್ ಗರ್ಲ್' ಎಂಬ ಶೀರ್ಷಿಕೆಯಡಿ ಮೊದಲ ಅಮೆರಿಕನ್ ಆವೃತ್ತಿ ಪ್ರಕಟಗೊಂಡಿತು. ಆ ಪುಸ್ತಕ ಫ್ರಾನ್ಸ್, ಜರ್ಮನಿ, ಜಪಾನ್ ಮತ್ತು ಅಮೆರಿಕದಲ್ಲಿ ಅಪಾರ ಜನಪ್ರಿಯತೆ ಪಡೆಯಿತು. ಜಪಾನಿನಲ್ಲಿ ಮೊದಲ ಆವೃತ್ತಿಯಲ್ಲೇ 1 ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾದವು. ಫ್ರಾಂಕ್‌ಳನ್ನು ಯುದ್ಧದ ಸಮಯದಲ್ಲಿ ಯುವಕ–ಯುವತಿಯರ ಜೀವನದ ವಿನಾಶವನ್ನು ಪ್ರತಿನಿಧಿಸುವ ಪ್ರಮುಖ ವ್ಯಕ್ತಿಯೆಂದು ಜಪಾನ್‌ನಲ್ಲಿ ಗುರುತಿಸಲಾಯಿತು.

1960ರಲ್ಲಿ ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ಆನ್ನಿಯ ಕುಟುಂಬ ತಲೆಮರೆಸಿಕೊಂಡಿದ್ದ ಅಡಗುತಾಣವನ್ನು, ಆನ್ನಿಯ ಜೀವನಕ್ಕೆ ಮೀಸಲಾದ ವಸ್ತು ಸಂಗ್ರಹಾಲಯವಾಗಿ ರೂಪಿಸಲಾಯಿತು. ಅಲ್ಲಿ ಆಕೆಯ ಬರಹಗಳ ಡೈರಿಯನ್ನು ಪ್ರದರ್ಶನಕ್ಕಿಡಲಾಗಿದೆ. ಆ ಮ್ಯೂಸಿಯಂ ಅನ್ನು 'ಆನ್ನಿ ಫ್ರಾಂಕ್ ಹೌಸ್' ಎಂದು ಕರೆಯಲಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in



**ಕವಿತೆಗೆ ಕೋಟಿ!**

ಆನ್ನಿ ಫ್ರಾಂಕ್ ಕೈ ಬರಹದ ಕವಿತೆಯೊಂದು ಇತ್ತೀಚೆಗೆ 140,000 ಯೂರೋಗಳಿಗೆ (ಸುಮಾರು 1.25 ಕೋಟಿ) ಹರಾಜಿನಲ್ಲಿ ಮಾರಾಟವಾಯಿತು. ಆ ಕವಿತೆಯನ್ನು, ಫ್ರಾಂಕ್ ಕುಟುಂಬ ಅಡಗುಸ್ಥಾನಕ್ಕೆ ಹೋಗುವ ನಾಲ್ಕು ತಿಂಗಳು ಮೊದಲು, 1942ರ ಮಾರ್ಚ್ 28ರಂದು ಆನ್ನಿ ಬರೆದಿದ್ದಳು.


